ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಸ್ವಾಮಿ, ಮೂರು ರಾಜ್ಯಗಳ ಮಂತ್ರಿಗಳು ಸೇರಿ ಪಾನ ನಿರೋಧದ ಬಗ್ಗೆ ಲೋಕಾಭಿರಾಮವಾಗಿ ಮಾತನಾಡಿದ್ದಾರೆ. ಪಾನನಿರೋಧ ಇರಬೇಕೇ ಅಥವಾ ತೆಗೆದುಹಾಕಬೇಕೇ ಎನ್ನುವ ವಿಚಾರದಲ್ಲಿ ತಮ್ಮ ನಿಲುವು ಏನು ಇದೆ? ಇದಕ್ಕಾಗಿ ಮುಖ್ಯಮಂತ್ರಿಗಳು ಕನ್ಯಾಕುಮಾರಿಯಲ್ಲಿ ಸೇರಿದ್ದಿರಲ್ಲವೆ? ನಿಮ್ಮ ನಿಲುವು ಏನು ತಿಳಿಸುತ್ತೀರಾ?

Mr. SPEAKER.—That has been answered. The same question was put by Sri Revanna Siddappa and it was answered; Sri Muckannappa was perhaps inattentive.

Sri C. J. MUCKANNAPPA.—Never, Sir. What was the definite stand of our Chief Minister I want to know.

Mr. SPEAKER.—I think, it has been answered.

Sri S. NIJALINGAPPA.—I have answered this question, Sir.

ಶ್ರೀ ಎಸ್. ಎಂ. ಕೃಷ್ಣ.—ಪಾನನಿರೋಧದ ವಿಚಾರದಲ್ಲಿ ನಮ್ಮಕ್ಕೆ ಇರತಕ್ಕಂಥ ಅನಿಶ್ಚಿತ ಪರಿಸ್ಥಿತಿಯು ಇನ್ನೂ ಎಷ್ಟು ದಿವಸ ಮುಂದುವರಿಯುತ್ತದೆ?

ಶ್ರೀ ಎಸ್. ನಿಜಲಿಂಗಪ್ಪ.—ಅವಶ್ಯಕತೆ ಇರುವಷ್ಟು ದಿವಸ ಮುಂದುವರಿಯುತ್ತದೆ.

ಶ್ರೀ ಇ. ನಾರಾಯಣಗೌಡ.—ಸಾರ್ವಜನಿಕರ ಅಭಿಪ್ರಾಯ ಶೇಖರಣೆ ಮಾಡುವುದಕ್ಕೆ ಏನಾದರೂ ಪ್ರಯತ್ನ ಮಾಡುತ್ತೀರಾ?

ಶ್ರೀ ಎಸ್. ನಿಜಲಿಂಗಪ್ಪ.—ನಿಮ್ಮ ಸೂಚನೆ ಯೋಚನಾರ್ಹವಾಗಿದೆ; ಯೋಚನೆಮಾಡುತ್ತೇವೆ.

ಶ್ರೀ ಬಿ. ಭಾಸ್ಕರಶೆಟ್ಟಿ.—ಪಾನನಿರೋಧ ದೇಶದಲ್ಲಿ ವಿಫಲವಾಗಿದೆಯೆಂದು ಸರಕಾರದ ತಿಳುವಳಿಕೆಗೆ ಬಂದಿದೆಯೇ? ಹಾಗಾದರೆ ಮುಂದಿನ ಕ್ರಮ ತೆಗೆದುಕೊಳ್ಳುವ ಆಲೋಚನೆ ಇದೆಯೆ?

ಶ್ರೀ ಎಸ್. ನಿಜಲಿಂಗಪ್ಪ.—ಆ ರೀತಿ ತಿಳುವಳಿಕೆ ಬಂದಿಲ್ಲ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಮುಖ್ಯ ಮಂತ್ರಿಗಳು ಕನ್ಯಾಕುಮಾರಿಯಲ್ಲಿ ಸೇರಿದ ಮೇಲೆ ದಿಲ್ಲಿಗೆ ಹೋಗಿದ್ದರು. ಈ ವಿಚಾರ ತೀರ್ಮಾನ ಮಾಡಿ ಈ ವಿಷಯದಲ್ಲಿ ಬೇರೆ ನಿಲುವು ತಾಳಿದ್ದೀರಾ?

ಶ್ರೀ ಎಸ್. ನಿಜಲಿಂಗಪ್ಪ.—ನಮ್ಮಕ್ಕೆ ನಿಲುವು ಬದಲಿಸಬೇಕಾಗಿಲ್ಲವೆಂದು ತೀರ್ಮಾನಮಾಡಿದೆ.

Sri L. B. BIRJE (Spoke in Marathi and translated by Sri V. S. Patil).—He says that during this emergency, when it is proved that prohibition is a failure, whether Government thinks that emergency is of greater importance than prohibition?

Sri S. NIJALINGAPPA.—Emergency is certainly of greater importance, Sir.

ಶ್ರೀ ಎಸ್. ಶಿವಪ್ಪ.—ಪಾನನಿರೋಧ ನಿರೀಕ್ಷಿಸಿದಷ್ಟು ಯಶಸ್ವಿಯಾಗದೇ ಇರುವುದರಿಂದ ಸಂಪೂರ್ಣವಾಗಿ ಜಾರಿಗೆ ತರುವುದಕ್ಕೆ ಹಿಂದುಮುಂದು ನೋಡುತ್ತಿದ್ದೀರಲ್ಲವೆ?

ಶ್ರೀ ಎಸ್. ನಿಜಲಿಂಗಪ್ಪ.—ಮೊದಲನೆಯದಾಗಿ ಪಾನನಿರೋಧ ಯಶಸ್ವಿಯಾಗಿದೆಯೇ ಇಲ್ಲವೇ ಎಂದು ಹೇಳುವದಿಲ್ಲವಾದ್ದರಿಂದ ಹಿಂದುಮುಂದು ನೋಡುವುದಕ್ಕೆ ಕಾರಣವಿಲ್ಲ. ಇದನ್ನು ಯೋಚನೆಮಾಡುತ್ತಿದ್ದೇವೆ.

ಶ್ರೀ ಬಿ. ಭಾಸ್ಕರಶೆಟ್ಟಿ.—ಈಗಿನ ತುರ್ತುಪರಿಸ್ಥಿತಿಯ ದೆಶೆಯಿಂದ ಪಾನನಿರೋಧ ರದ್ದು ಗೊಳಿಸಲು ಆಲೋಚನೆಮಾಡುತ್ತೀರಾ?

ಶ್ರೀ ಎಸ್. ನಿಜಲಿಂಗಪ್ಪ.—ತುರ್ತುಪರಿಸ್ಥಿತಿಗೂ ಅದಕ್ಕೂ ಸಂಬಂಧಹಾಕುವುದಕ್ಕೆ ಇಷ್ಟಪಡುವುದಿಲ್ಲ. ಅದರ ಅವಶ್ಯಕತೆಯ ಮೇಲೆ ಅದನ್ನು ನೋಡೋಣ.

ಶ್ರೀ ಎಸ್. ಎಂ. ಕೃಷ್ಣ.—ಪಾನನಿರೋಧ ಯಶಸ್ವಿಯಾಗಿದೆ ಎಂದು ಅಭಿಪ್ರಾಯಪಡುತ್ತೀರಾ?

ಶ್ರೀ ಎಸ್. ನಿಜಲಿಂಗಪ್ಪ.—ಹಾಗೆ ಹೇಳಲಿಲ್ಲ.

ಶ್ರೀ ಎಸ್. ಎಂ. ಕೃಷ್ಣ.—ಹಾಗಾದರೆ ವಿಫಲವಾಗಿದೆ ಎಂದು ಅಭಿಪ್ರಾಯವೇ?

ಶ್ರೀ ಎಸ್. ನಿಜಲಿಂಗಪ್ಪ.—ಹಾಗೂ ಹೇಳಲಿಲ್ಲ.

ಶ್ರೀ ಡಿ. ಪರವೆಶ್ವರಪ್ಪ.—ಪಾನನಿರೋಧ ಇರಬೇಕೇ ಬೇಡವೇ ಎನ್ನುವುದಕ್ಕೆ ಜನರ ಅಭಿಪ್ರಾಯ ತೆಗೆದುಕೊಳ್ಳುವುದಕ್ಕೆ ಏನಾದರೂ ಕ್ರಮ ತೆಗೆದುಕೊಳ್ಳುತ್ತೀರಾ?

ಶ್ರೀ ಎಸ್. ನಿಜಲಿಂಗಪ್ಪ.—ಜನರ ಅಭಿಪ್ರಾಯ ನಾನಾರೀತಿಯಾಗಿದೆ. ಇದು ಮಾನ್ಯ ಸದಸ್ಯರಿಗೂ ಗೊತ್ತಿದೆ. ಬೇಕು ಎನ್ನುವ ಜನ ಇದ್ದಾರೆ, ಬೇಡ ಎನ್ನುವವರೂ ಇದ್ದಾರೆ. ಆದ್ದರಿಂದ ಪರಿಶೀಲನೆ ಮಾಡಬೇಕಾಗಿದೆ. ಎಷ್ಟರ ಮಟ್ಟಿಗೆ ಯಶಸ್ವಿಯಾಗಿದೆ ಎನ್ನುವುದನ್ನು ಪುನಃ ಯೋಚನೆ ಮಾಡತಕ್ಕಂಥ ಕಾಲ ಬಂದಿದೆ. ಇದು ನನ್ನ ಸ್ಪಷ್ಟ ಅಭಿಪ್ರಾಯ.

ಶ್ರೀ ಡಿ. ಪರಮೇಶ್ವರಪ್ಪ.—ಪಾನನಿರೋಧ ಯಶಸ್ವಿಯಾಗಿಲ್ಲ ಎಂದು ತಿಳಿದುಕೊಳ್ಳುವುದಕ್ಕೆ ಸಾಕಷ್ಟು ಆಧಾರ ಕ್ರಿಮಿನಲ್ ಕನ್‌ವಿಕ್ಷನ್ ಅಂಕಿ ಸಂಖ್ಯೆಗಳಿಂದ ಸಿಕ್ಕುವುದಿಲ್ಲವೆ ?

ಶ್ರೀ ಎಸ್. ನಿಜಲಿಂಗಪ್ಪ.—ಅದರಿಂದ ಸಿಕ್ಕುವುದಿಲ್ಲ.

ಶ್ರೀ ಸಿ. ಆರ್. ರಂಗೇಗೌಡ.—ಯಶಸ್ವಿಯಾಗಿ ಮಾಡಲು ಜನರ ನಲಹೆ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಎಸ್. ನಿಜಲಿಂಗಪ್ಪ.—ಇದು ಒಂದು ಸೂಚನೆ, ಗಮನಾರ್ಹವಾದುದು.

Sri SANJEEVANATH AIKALA.—Does it not amount to a sort of discrimination if people are allowed to drink where the legislators meet and not in other places ?

Mr. SPEAKER.—I disallow that question.

Sri N.O. SAMAJI.—(Spoke in Marathi and it is Translated by Sri V.S. Patil) If prohibition is scrapped in the Mysore State, what would be the probable income that the Government may get ?

Sri S. NIJALINGAPPA.—I expect about 8 to 10 crores.

ಶ್ರೀ ಪಿ. ಬಿ. ಬೊಮ್ಮಣ್ಣ.—ಪಾನನಿರೋಧ ಜಾರಿ ಇರುವ ಪ್ರದೇಶದಲ್ಲಿ ಕೆಲವರು ಹಾರ್ಟ್ ಫೇರ್ ಆಗಿ ಸತ್ತಿದ್ದರೂ ಕೂಡ ಪಾನನಿರೋಧ ಮೂಲಕ ಕಳ್ಳಭಟ್ಟಿ ಸಾರಾಯಿ ಕುಡಿದು ಸತ್ತುಹೋಗಿದ್ದಾರೆಂದು ದೂರು ಕೊಟ್ಟಿರುವ ವಿಷಯ ಸರಕಾರದ ಗಮನಕ್ಕೆ ಬಂದಿದೆಯೆ?

ಶ್ರೀ ಎಸ್. ನಿಜಲಿಂಗಪ್ಪ.—ಸತ್ತುಹೋದುದು ನಿಜ. ಆದರೆ ಕಳ್ಳಭಟ್ಟಿ ಸಾರಾಯಿ ಕುಡಿದು ಸತ್ತುಹೋದರೋ ಅಥವಾ ಅದಕ್ಕೆ ಕಾರಣವೇನೂ ಗೊತ್ತಿಲ್ಲ.

Sri L. B. BIRJE (Spoke in Marathi—translated by Sri V.S. Patil).—Sir, he says that prohibition has become the root cause for most of the murders, dacoits and other crimes in society ; the public are convinced about it but whether Government would agree with that view ?

Sri S. NIJALINGAPPA.—I do not admit that it is the root cause of all evils.

ಶ್ರೀ ವೀರಭದ್ರಪ್ಪ ಈರಪ್ಪ.—ಮುಖ್ಯ ಮಂತ್ರಿಗಳು ಈ ಪಾನನಿರೋಧದ ವಿಚಾರ ರೀಕನ್ಸಿಡರೇಷನ್ ಮಾಡರಾಗುವುದೆಂದು ಸ್ಟೇಟ್‌ಮೆಂಟ್ ಕೊಟ್ಟಿದ್ದಾರೆ. ಅದು ಈಗ ಯಾವ ಹಂತದಲ್ಲಿದೆ ?

ಶ್ರೀ ಎಸ್. ನಿಜಲಿಂಗಪ್ಪ.—Reconsideration ಪ್ರಾರಂಭವಾಗಿದೆ.

Sri SANJEEVANATH AIKALA.—May I know whether Government have received any representations from any persons that some of the provisions of the Act have interfered with the performance of their legitmate duties ?

Sri S. NIJALINGAPPA.—I am not aware of any such representation.

ಶ್ರೀ ಪಿ. ವೆಂಕಟಗಿರಿಯಪ್ಪ.—ಮುಖ್ಯಮಂತ್ರಿಗಳ ನಭೆಯಲ್ಲಿ ಯು. ಪಿ. ಯಲ್ಲಿ ಪ್ರೊಹಿಬಿಷನ್ ಸ್ಯಾ ್ಯಷ್ ಮಾಡಿರುವುದನ್ನು ತಾವು ಗಣನೆಗೆ ತೆಗೆದುಕೊಂಡಿರಾ ?

ಶ್ರೀ ಎಸ್. ನಿಜಲಿಂಗಪ್ಪ.—ಪರಿಶೀಲನೆ ಮಾಡುವಾಗ ಎಲ್ಲವೂ ಪರಿಶೀಲನೆಗೆ ಬರುತ್ತದೆ.

Early completion of the Sharavathi Valley Hydro-Electric Project.

*Q.—285. **Sri GANJI VEERAPPA** (Harihar).—

Will the Government be pleased to state :—

(*a*) when the First Stage of the Sharavathi Valley Hydro-Electric Project would be completed ;

(*b*) the quantity of power that is likely to be got with the completion of the I Stage ;

(SRI GANJI VEERAPPA)

(*c*) when the whole Scheme is expected to be completed ;

(*d*) whether the Government of India have promised to give extra grants for the early completion of the Project ?

A.—Sri S. NIJALINGAPPA (Chief Minister).—

(*a*) The First unit will be commissioned during April 1964 and the Second Unit a few months later.

(*b*) 1,78,200 K. W.

(*c*) During the Fourth Plan period.

(*d*) Accelerated assistance for speedy completion is being given by Government of India.

Sri GANJI VEERAPPA.—Is the delay in completing the first stage due to the delay in the completion of the civil portion of the work ?

† Sri S. NIJALINGAPPA.—The civil portion of the work had to be delayed on account of the changes in design, but it is going on apace.

Sri GANJI VEERAPPA.—Then how many years do the Government expect to take for the completion of the entire scheme ?

Sri S. NIJALINGAPPA.—The entire scheme is still not final because we have been thinking of generating units and turbines in the first, second and third stage and in the fourth stage we have the idea of producing power at the tail-base. If all these things are to be gone through, it may take us to about the middle of the FourthFive-Year Plan.

Sri GANJI VEERAPPA.—Has the entire scheme been approved by the Planning Commission?

Sri S. NIJALINGAPPA.—So far, the first and second stages have been approved and the third stage is going to be approved.

Sri G. V. GOWDA.—You have been pleased to say "Accelerated assistance for speedy completion is being given by the Government of India". May I know the assistance they have given during 1961-62, 1962-63 and the amount expected during the next year ?

Sri S. NIJALINGAPPA.—During 1963-64 it will be of the order of Rs. 6.5 crores. Last year it was Rs. 3.5 crores.

ಶ್ರೀ ಎಸ್. ಗೋಪಾಲಗೌಡ.—ಮೊದಲೇ ಸರ್ಕಾರದವರು ತಿಳಿಸಿದಂತೆ 1962ನೇ ಇಸವಿ ಡಿಸೆಂಬರ್ 30ನೇ ತಾರೀಖಿನೊಳಗೆ ಇದು ಪ್ರಾರಂಭವಾಗುವುದು ಎಂದು ಏನು ಹೇಳಿದ್ದರೋ ; ಅದು ಹೀಗೆ 1966ನೇ ಇಸವಿವರೆಗೆ ತಡ ಆಗುವುದಕ್ಕೆ ಏನೇನು ಕಾರಣಗಳು, ತಿಳಿಸುತ್ತೀರಾ ?

ಶ್ರೀ ಎಸ್. ನಿಜಲಿಂಗಪ್ಪ.—ಇದನ್ನು ಸಾಕಷ್ಟು ಹೇಳಿದ್ದಾಗಿದೆ ; ಡಿಸ್ಕ್ಯೂಷನ್ನಲ್ಲಿ ಬದಲಾವಣೆ ಯಾಯಿತು. ಮೊದಲು ಒಂದು ಮೇಸನ್ರಿ ಡ್ಯಾಮ್ ಕಟ್ಟಬೇಕೆಂದು ಆಗಿತ್ತು ; ಅದು ಸಾಧ್ಯವಾಗುವುದಿಲ್ಲ 100 ಅಡಿ ಮೇಲೆ ಹೋದರೆ ಭದ್ರವಾದ ತಳಪಾಯ ಸಿಗುವುದಿಲ್ಲವೆಂದು ಅರ್ದನ್ ಡ್ಯಾಮ್ ಕಟ್ಟಬೇಕೆಂದು ತೀರ್ಮಾನುಮಾಡಿತು. ಚಿಂಡರ್ ವಗ್ಯೆರೆ ಕರೆದು ಅರ್ದನ್ ಡ್ಯಾಮ್ ಕಟ್ಟಬೇಕೆಂದು ತೀರ್ಮಾನ ಮಾಡುವುದರಲ್ಲಿ ತಡವಾಯಿತು. ಇದಕ್ಕೆ ಕೇಂದ್ರ ಸರ್ಕಾರದವರ ಅಪ್ರೂವಲ್ ಬೇಕಾಯಿತು. Rock filling ಮತ್ತು dock filling ಇಷ್ಟು ದಪ್ಪ ಮಾಡಬೇಕು ಎಂದು ತೀರ್ಮಾನ ಮಾಡಿದಮೇಲೆ, ಇಲ್ಲ, ಸಾಲದು, ಜಾಸ್ತಿಮಾಡಬೇಕೆಂದು, ಅಲ್ಲಿಂದ ಬಂದಿತು. ಹೀಗೆ ಆಗಿ, ನಾನಾ ರೀತಿಯಲ್ಲಿ ಸ್ವಲ್ಪ ತಡವಾಗಿದೆ. ಕೆಲವು ಸಾಮಾನುಗಳು ಬರಬೇಕಾಗಿತ್ತು. ಒಂದು ಜನರೇಟರ್ ಕೆಲವು ಭಾಗ ಮುಳುಗಿಯೇ ಹೋಯಿತು. ಅದರಿಂದ 6-7 ತಿಂಗಳು ತಡವಾಯಿತು. ಇನ್ನೂ ಕೆಲವು

ಸಾಮಾನುಗಳು ಬರಬೇಕಾಗಿದೆ ; ಒತ್ತೆಪ್ರಯತ್ನಮಾಡಿದ್ದೇವೆ, ಬೇಗ ಬರುವ ನಿರೀಕ್ಷಣೆ ಮಾಡುತ್ತಿದ್ದೇವೆ, ಮಾರ್ಚ್ ಅಥವ ಏಪ್ರಿಲ್‌ನಲ್ಲಿ ಪವರ್ ಕೊಡುವುದಕೆ ಸಾಧ್ಯವಾದೀತು.

Sri G. V. GOWDA.—I wish to know whether the assistance the Central Government have given is outside the Plan ?

Sri S. NIJALINGAPPA.—It is within the Plan. It is not within the core.

Sri G. V. GOWDA.—In view of the meagre financial resources of the State, cannot efforts be made to see that the entire project is taken as a Centrally sponsored scheme, so that the Central Government would bear the entire cost ?

Sri S. NIJALINGAPPA.—It does not help matters. There is no question of want of funds. It is a question of getting things now. Even small things are not coming forth. There is difficulty about foreign exchange. There is some delay here and there.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ತಾವು ಎಷ್ಟೆಷ್ಟು ಕೇಳಿದ್ದಿರಿ, ಅವರು ಎಷ್ಟು ಕೊಟ್ಟರು ?

ಶ್ರೀ ಎಸ್. ನಿಜಲಿಂಗಪ್ಪ.—ಅರು ಕೋಟಿ ರೂಪಾಯಿ ಮೊದಲು ಕೊಟ್ಟಿದ್ದರು, ನಾವು ಖರ್ಚು ಮಾಡಲು, ಪುನಃ ಅರುಕೋಟಿ ರೂಪಾಯಿ ಕೊಟ್ಟಿದ್ದಾರೆ. ಕಡಿಮೆ ಬಂದರೆ ಇನ್ನೂ ಕೊಡುತ್ತಾರೆ, ದುಡ್ಡಿನ ಕೊರತೆ ಇಲ್ಲ.

ಶ್ರೀ ಎಸ್. ಗೋಪಾಲಗೌಡ.—ಕಟ್ಟೆ ಕೆಲಸ ತೀವ್ರವಾಗಿ ಮುಗಿಸಬೇಕೆಂದು ಸರ್ಕಾರದವರು ಅಮಾನ ಮಾಡುತ್ತಿದ್ದ ಕೆಲಸವನ್ನು ಬದರಾಯಿಸಿ ದೊಡ್ಡ ಕಂಟ್ರಾಕ್ಟರುಗಳಿಗೆ ವಹಿಸಲಿಲ್ಲವೇ ?

ಶ್ರೀ ಎಸ್. ನಿಜಲಿಂಗಪ್ಪ.—ಭಹಳ ದಿವಸ ಆಯಿತು ; ಇದು ಹಳೆಯ ಕಥೆ.

ಶ್ರೀ ಎಸ್. ಶಿವಪ್ಪ.—ಈ power project ಕಟ್ಟಿನತಕ್ಕಂಥ ಖಜನ್ಸಿ, ಎಲೆಕ್ಟ್ರಿಸಿಟಿ ಬೋಡೋರ್ಡ್ ಅಥವ ಸರ್ಕಾರವೋ ?

ಶ್ರೀ ಎಸ್. ನಿಜಲಿಂಗಪ್ಪ.—ಎಲೆಕ್ಟ್ರಿಸಿಟಿ ಬೋರ್ಡ್ ಕಟ್ಟಿನುವುದಿಲ್ಲ.

Sri S. SIVAPPA.— Is it not the responsibility of the Electricity Board to take up all these projects ?

Sri S. NIJALINGAPPA.—Not at all.

ಶ್ರೀ ಎಸ್ ಗೋಪಾಲಗೌಡ.—ಹೆಚ್ಚು ತಡವಾಗುತ್ತಿರುವುದರಿಂದ establishment ಹೆಚ್ಚಿ ಬಹಳ ಹೆಚ್ಚಾಗುವುದಿಲ್ಲವೇ ?

ಶ್ರೀ ಎಸ್. ನಿಜಲಿಂಗಪ್ಪ.—Staff ಖರ್ಚು ಭಹಳ ಕಡಿಮೆ ಇದ್ದರೂ, ತಡವಾಗುವುದರಿಂದ, ಬರುವ ಆದಾಯ ಹೋಗುತ್ತದೆ ಎನ್ನುವುದು ಇರತಕ್ಕಂಥ ಯೋಜನೆ.

Sri SANJEEVANATH AIKALA.—What is the total amount estimated to be spent when the entire scheme is completed ?

Sri S. NIJALINGAPPA.—As I said, the entire scheme is still to be worked out because of the tail-base and other things. Now it comes to about Rs. 70 crores.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಹಿಂದಿನ ಪಿ. ಡಬ್ಲ್ಯು. ಡಿ. ಮಂತ್ರಿಗಳು, ಜಾಸ್ತಿ ರೇಟ್ ಏಕೆ ಕೊಟ್ಟರು ಎಂದರೆ 1963ಕ್ಕೆ ಕೆಲಸ ಮುಗಿಸುವ ಕಾರಣದಿಂದ ಎಂದು ಹೇಳಿದರು. ಇಷ್ಟು ಹಣ ಹೆಚ್ಚಾಗಿ ಖರ್ಚು ಮಾಡಿದರೂ ನಮಗೆ ಅಗ್ರೀಮೆಂಟ್ ಪ್ರಕಾರ ಕೆಲಸ ಮುಗಿಸಿ ಕರೆಂಟ್ ಕೊಡದಿದ್ದಕ್ಕೆ ಅವರು ಏನು ಹೇಳಿದರು ?

ಶ್ರೀ ಎಸ್. ನಿಜಲಿಂಗಪ್ಪ.—ಅದನ್ನು ಕೇಳಬೇಕು. ಆಗಿನ ಸರ್ಕಾರದ ಇರಾದೆ ಇದ್ದದ್ದು ಆದಷ್ಟು ಜಾಗ್ರತೆ ಮಾಡಬೇಕೆಂದು, ತಡ ಏಕಾಯಿತು ಎನ್ನುವುದಕ್ಕೆ ಕಾರಣ ನಾನು ಆಗಲೇ ಹೇಳಿದ್ದೇನೆ.

ಶ್ರೀ ಎಸ್. ಗೋಪಾಲಗೌಡ.—ಜನರೇಟಿಂಗ್ ಸ್ಟೇಷನ್ ನಿರ್ಮಾಣವನ್ನು Eletric Board ನವರು ವಹಿಸಿಕೊಳ್ಳಬೇಕು ಎನ್ನತಕ್ಕಂಥ ತೀರ್ಮಾನವನ್ನು ಸರ್ಕಾರದವರು ಕೈಗೊಳ್ಳಲಿದ್ದಾರೆಯೇ ?

ಶ್ರೀ ಎಸ್. ನಿಜಲಿಂಗಪ್ಪ.—ಇಲ್ಲ. ತೀರ್ಮಾನ ತೆಗೆದುಕೊಂಡಿಲ್ಲ.

Sri V. S. PATIL.—Are the Government aware that the Koyna Hydro-Electric Project which was a more scientifically difficult project has been completed according to the schedule without any sort of hindrance ? Why is our project of Sharavathi which is simpler when compared to the Koyna Hydro-Electric Project being delayed and delayed and the Chief Minister or the Public Works Minister has to put up some excuse before this House. May I know whether Government are going to the root of the cause for this delay and see that no excuses are put forth again ?

Sri S. NIJALINGAPPA.—My friend has entirely misunderstood the two schemes. The Koyna scheme took a long time to be finalised and what is more, the scheme is entirely within the rocks ; it is not outside. Therefore, it is a much simpler scheme and much more easy. It is a question of creating a space inside the rocks for the location of the Power House. In this case, unfortunately our Engineers thought of having Power House on the other side. If they had decided on this side, possibly another Koyna Scheme would have been there. In this case they never thought of the area on the Mysore side so much so that the soil is treacherous and they have to open a Power House and lay penstock pipes. There is a lot of difficulty and still the matter is complicated. Just three days back, there was a treacherous land-slide and some persons died.

1-30 P.M.

ಶ್ರೀ ಎಸ್. ಗೋಪಾಲ ಗೌಡ.—ಅಲ್ಲಿರುವ ವಿಷಯದಲ್ಲಿ ಕೆಲವು ಅಪಾದನೆಗಳು ಈ ಸಭೆಯಲ್ಲಿ ಬಂದಿವೆ, ಹೊರಗಡೆಯೂ ಬಂದಿವೆ. ಬಹಳ ಜವಾಬ್ದಾರಿಯುತರಾದ ಜನರು ತಮ್ಮ ಕಡೆಯವರೂ ಕೂಡ ಮಾಡಿದ್ದಾರೆ. ಈ ಅನುಮಾನ ಹೋಗರಾಡಿಸಬೇಕೆಂದು ಆ ವಿಷಯದಬಗ್ಗೆ ಸರ್ಕಾರದವರು ಒಂದು ನ್ಯಾಯವಾದ ವಿಚಾರಣೆಯನ್ನು ಮಾಡಿ, ಬಹಿರಂಗ ವಿಚಾರಣೆ ಅಲ್ಲದೇ ಇದ್ದರೂ-ಏನಾದರೂ ಅನ್ಯಾಯ ನಡೆಯುತ್ತಾ ಇದ್ದರೆ ಅದನ್ನು ಸರಿಪಡಿಸುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಎಸ್. ನಿಜಲಿಂಗಪ್ಪ.—ಇದು ಏನಾಗಿದೆ ಎಂದರೆ ; ಇದರಲ್ಲಿ ಆರ್ಬಿಟ್ರೇಷ್ಣ ಕ್ಲಾಸ್ ಎಂದು ಒಂದು ಹಾಕಿದ್ದಾರೆ, ಉದ್ದೇಶ ಏನಿತ್ತೊ, ಅಂತೂ ಅದು ಬಂದಿದೆ. ಅದರಿಂದ ಕೆಲವು ಸಮಯದಲ್ಲಿ ಸರ್ಕಾರದವರು ನಿಸ್ಸಹಾಯಕರಾಗಿ ಕೆಲವು ಹಣಕೊಡಬೇಕಾಗಿ ಬಂದಿದೆ. ಈಚೆಗೆ ಎರಡು ಮೂರು ಕೇಸುಗಳು ಬಂದಿದ್ದುವು. ಅವನ್ನು ಕೋರ್ಟಿಗೆ ಕಳುಹಿಸಿದ್ದೇವೆ. ಆದ್ದರಿಂದ ಈಗೇನೂ ಮಾಡಲಕ್ಕೆ ಬರುವುದಿಲ್ಲ.

Sri V. S. PATIL.—The ex-P.W.D. Minister Sri Channabasappa had given us an assurance on the floor of this House that the cost of production could be Rs. 550 per K. W. of energy. May I know what is the probable cost now, when the first and second stages are completed. ?

Sri S. NIJALINGAPPA.—In view of the change in design and in view of the rates of generators and turbines going up, I think it will be round about Rs. 700 per K. W.

ಶ್ರೀ ಎಸ್. ಎಂ. ಕೃಷ್ಣ.—ಸರ್ಕಾರದವರಿಗೆ ನಿಸ್ಸಹಾಯಕತೆ ಎಂದು ಹೇಳಿದಿರಿ. ಈ ನಿಸ್ಸಹಾಯಕತೆಗೆ ಕಾರಣರು ಯಾರು ?

ಶ್ರೀ ಎಸ್. ನಿಜಲಿಂಗಪ್ಪ.—ಪರಿಸ್ಥಿತಿ ಏಕೆಂದರೆ, ಕಾಂಟ್ರ್ಯಾಕ್ಟ್ ಇದೆ ; ಆರ್ಬಿಟ್ರೇಷ್ಣಗೆ ಹೋಗಬೇಕೆಂದು ಇದೆ. ಆರ್ಬಿಟ್ರೇಟರ್ಸು ತೀರ್ಮಾನ ಮಾಡುತ್ತಾರೆ, ರಾಯರುಗಳು ಸರಿ ಅಂತ ಹೇಳುತ್ತಾರೆ, ಸರ್ಕಾರ ಒಪ್ಪಿಕೊಳ್ಳಬೇಕಾಗುತ್ತದೆ.

Mr. SPEAKER.—Arbitration clauses are perfectly proper and they are found in many contracts.

ಶ್ರೀ ಜಿ. ಎ. ಗೌಡ.—ಕರಾರಿನಲ್ಲ ಸರ್ಕಾರದ ಹಿತಕ್ಕೆ ಧಕ್ಕೆ ಬರತಕ್ಕಾ ನಿಯಮವಿರುವುದರಿಂದ ಅದನ್ನು ಬದಲಾಯಿಸುವುದಕ್ಕೆ ವ್ಯವಸ್ಥೆ ಮಾಡಲು ಸಾಧ್ಯವಾಗುವುದಿಲ್ಲವೇ ?

ಶ್ರೀ ಎಸ್. ನಿಜಲಿಂಗಪ್ಪ.—ಒಂದು ತೀರ್ಮಾನ ತೆಗೆದುಕೊಂಡಿದ್ದೇವೆ. ಇನ್ನು ಮೇಲೆ ಆರ್ಬಿ ಟ್ರೇಷನ್ ಇರಲೇಕೂಡದು ಎಂದು.

Mr. SPEAKER.—Next Question No. 296 would be held over since the Hon'ble Minister is out of station.

Wells constructed under N.E.S. in Shirahatti Taluk.

*Q.—308. Sri SIDDAIAH KASHIMATH (Shirahatti).—

Will the Government be pleased to state :—

(a) the number of wells that are constructed under N. E. S. in Shirahatti Taluk ;

(b) the number of wells which remain incomplete for the past five years in that taluk and the reasons for the delay in completing them ?

A.—Sri KONDAJJI BASAPPA (Deputy Minister for Co-operation).—

(a) 1. Irrigation wells ... 30

2. Drinking water wells ... 2

(b) Nil.

ಶ್ರೀ ಸಿದ್ದಯ್ಯ ಕಾಶೀಮಠ್.—(ಬ) ಪ್ರಶ್ನೆಗೆ ಉತ್ತರವಾಗಿ ಯಾವುದೂ ಇಲ್ಲವೆಂದು ಹೇಳಿದ್ದೀರಿ, ಹಾಗಿದ್ದರೆ ಇಂಥಾ ಬಾವಿಗಳಿಗೆ ಆದ ಯೋಜನೆಯಲ್ಲಿ ಒದಗಿಸಿದ್ದ ಹಣ ಎಷ್ಟು ?

†ಶ್ರೀ ಕೊಂಡಜ್ಜಿ ಬಸಪ್ಪ.—50 ಸಾವಿರ ರೂಪಾಯಿ.

ಶ್ರೀ ಸಿದ್ದಯ್ಯ ಕಾಶಿಮಠ್.—ಹಾಗಾದರೆ ಯೋಜನೆಯ ಪ್ರಕಾರ ಅಷ್ಟು ಬಾವಿಗಳು ಆಗಿವೆ ಎಂದು ಭಾವನೆಯೇ ?

ಶ್ರೀ ಕೊಂಡಜ್ಜಿ ಬಸಪ್ಪ.— ಈಗ ಪೂರ್ತಿ ಆಗಿರುವುದು ಎಷ್ಟು ಎಂಬುದನ್ನು ಹೇಳಿದ್ದೇವೆ.

ಶ್ರೀ ಟಿ. ಕೆ. ಕಂಬಳಿ.—ಕುಡಿಯುವ ನೀರಿನ ಬಾವಿಗಳು ಎರಡು ಆಗಿವೆ ಎಂದು ಹೇಳಿದ್ದೀರಿ. ಯಾವ ಯಾವ ಗ್ರಾಮಗಳಲ್ಲ? ಅದಕ್ಕಿಂತ ಹೆಚ್ಚು ಬಾವಿಗಳು ಬೇಕೆಂದು ಸರ್ಕಾರದವರಿಗೆ ಮನವಿ ಬಂದಿಲ್ಲವೇ ?

ಶ್ರೀ ಕೊಂಡಜ್ಜಿ ಬಸಪ್ಪ.—ಅಲ್ಲ ಕೇಳಿರುವುದಕ್ಕೆ ಸರಿಯಾದ ಉತ್ತರ ಕೊಡಲಾಗಿದೆ. ಅರ್ಜಿಗಳು ಎಷ್ಟು ಬಂದಿವೆ ಎಂದು ಕೇಳಿದ್ದರೆ ಉತ್ತರ ಕೊಡಬಹುದಾಗಿತ್ತು.

ಶ್ರೀ ಸಿ. ಆರ್. ರಂಗೇಗೌಡ.—ಎಕ್. ಇ. ಎಸ್. ಮೇರೆಗೆ ನೀರಾವರಿ ಬಾವಿಗಳು 30, ಕುಡಿಯುವ ನೀರಿನ ಬಾವಿಗಳು 2 ನಿರ್ಮಿಸಲಾಗಿವೆ ಎಂದು ಹೇಳಿದ್ದೀರಿ. ರಾಷ್ಟ್ರೀಯ ವಿಪತ್ತ್ರಣಾ ಯೋಜನೆಯನ್ನು ಶಿರಹಟ್ಟಿ ತಾಲ್ಲೂಕಿನಲ್ಲ ಪ್ರಾರಂಭ ಮಾಡಿದ್ದು ಯಾವಾಗ ?

ಶ್ರೀ ಕೊಂಡಜ್ಜಿ ಬಸಪ್ಪ.—1956ರಲ್ಲಿ.

Shifting of the Government of India Co-operative Training College from Mysore to Bangalore.

*Q.—317. Sri M. C. BASAPPA (Chamarajanagar).—

Will the Government be pleased to state :—

(a) whether it is a fact that Government of India Co-operative